ಬಡೋದೆಕರ್ (ಗಾಯನ), ಶ್ರೀಮತಿ ಕಿಶೋರಿ ಅಮೋನಕರ್ (ಗಾಯನ), ಉಸ್ತಾದ ಅಲಿ ಅಕ್ಬರಖಾನ (ಸರೋದ), ಉಸ್ತಾದ ಅಲ್ಲಾವುದ್ದೀನ ಖಾನ್ (ಸರೋದ) ಹೀಗೆ ಇನ್ನು ಅನೇಕ ಮಹಾನ ಕಲಾವಿರಿಗೆ ಸಾಥ ಮಾಡಿದ್ದಾರೆ. ಕೇವಲ ಹಿರಿಯ ಕಲಾವಿದರು ಮಾತ್ರವಲ್ಲದೆ ಯುವಕಲಾವಿದರರಿಗೆ ಸಾಥ ಮಾಡುತ್ತಿದ್ದರು. ಚೆನ್ನಾಗಿ ಹಾಡುವ, ನುಡಿಸುವ ಯುವಕರ ಮೇಲೆ ಅಪಾರ ಪ್ರೀತಿ ಮಾಡಿ ಪ್ರೋತ್ಸಾಹಿಸುತ್ತಿದ್ದರು.

1962ರಲ್ಲಿ ಇವರು ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದಲ್ಲಿ ತಬಲ ಉಪನ್ಯಾಸಕರೆಂದು ನೇಮಕಾತಿಯಾಗಿ, ಸ್ನಾತಕೋತ್ತರ ಸಂಗೀತ ವಿಭಾಗದಲ್ಲಿಯು ಸಹಿತ ಅತಿಥಿ ಉಪನ್ಯಾಸಕರೆಂದು ಸೇವೆ ಮಾಡಿ 1988ರಲ್ಲಿ ನಿವೃತ್ತಿ ಹೊಂದಿದರು. 1933 ರಿಂದಲೇ ಆಕಾಶವಾಣಿಯ ಎ ' ಶ್ರೇಣಿಯ ಕಲಾವಿದರಾಗಿದ್ದು ಮುಂದೆ ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯಿಂದ 'ಕರ್ನಾಟಕ ಕಲಾತಿಲಕ' ಅಲ್ಲದೆ ಅನೇಕ ಸಾರ್ವಜನಿಕರಿಂದ ಪ್ರಶಸ್ತಿ – ಪುರಸ್ಕಾರಗಳು ದೊರೆತಿದೆ.

ಸರಳ ಸಜ್ಜನಿಕೆಯ ಕಲಾವಿದರಾದ ಬೆಂಡಿಗೇರಿಯವರು ಕರ್ನಾಟಕ ಕಂಡ ಅಪರೂಪದ ಕಲಾವಿದರು. ವಿಶೇಷವಾಗಿ ಕರ್ನಾಟಕದಲ್ಲಿ ತಬಲ ವಾದ್ಯದ ಪ್ರಚುರಾತೆಗೆ ಬೆಂಡಿಗೇರಿಯವರ ಕೊಡುಗೆ ಅಪಾರವಾದುದು. ಏಕೆಂದರೆ ಇವರ ಶಿಷ್ಯ ಪರಂಪರೆ ಬಹುದೊಡ್ಡದಾಗಿದೆ. ಇವರ ಪ್ರಮುಖ ಶಿಷ್ಯರುಗಳು ಪಂ ರಘುನಾಥ ನಾಕೋಡ, ಡಾ. ರಾಚಯ್ಯ ಹಿರೇಮಠ, ಪ್ರೋ. ಶ್ರೀಶೈಲ ಬಳ್ಳುರ, ಶ್ರೀ ಮೃತ್ಯುಂಜಯ ಆರಾಧ್ಯಮಠ, ಶ್ರೀ. ಸುಧೀಂದ್ರ ಮುಜುಮದಾರ, ಶ್ರೀ ನಂದಿಕೇಶ್ವರ ಗುರವ ಮುಂತಾದವರಾಗಿದ್ದಾರೆ. ಹೀಗೆ ಇನ್ನು ಅನೇಕ ಶಿಷ್ಯ ಬಳಗ ಇವರಿಗೆ ಇದೆ. ಇಂತಹ ಶಿಷ್ಯ ಬಳಗ ಬಂಧು ಮಿತ್ರರನ್ನು ಬಿಟ್ಟು ದಿ. 12–8–1990 ರಂದು ಧಾರವಾಡದ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು.

# ಅಧ್ಯಾಯ–7

## 6. ಪಂಡಿತ್ ಭಾತ್‌ಖಂಡೆ ಸ್ವರಲಿಪಿ ಪದ್ಧತಿ ಪರಿಚಯ

ಸಂಗೀತ ವಿದ್ಯಾರ್ಥಿಗಳು ಗಾಯನ, ವಾದನ, ಮಾಡುವುದರ ಜೊತೆಗೆ ತಬಲ ಬೋಲುಗಳನ್ನಾಗಲಿ, ಸ್ವರಗಳನ್ನಾಗಲಿ ತಾಲ–ಲಿಪಿ–ಸ್ವರ ಲಿಪಿಯಲ್ಲಿ ಬರೆಯುವ ಜ್ಞಾನ ಅತ್ಯವಶ್ಯಕವಾಗಿದೆ. ಸ್ವರಗಳನ್ನಾಗಲಿ ಅಥವಾ ತಬಲ ಬೋಲುಗಳನ್ನಾಗಲಿ ವೈಜ್ಞಾನಿಕ ರೀತಿಯಿಂದ ಕ್ರಮಬದ್ಧವಾಗಿ ಬರೆಯುವ ಪದ್ಧತಿಗೆ 'ಸ್ವರಲಿಪಿ' ತಾಲಲಿಪಿ ಎಂದು ಕರೆಯುವರು. ಈ ದಿಶೆಯಲ್ಲಿ ಹಿಂದೂಸ್ತಾನಿ ಸಂಗೀತ ಪದ್ಧತಿಯಲ್ಲಿ ಎರಡು ತಾಲ–ಲಿಪಿ ಪದ್ಧತಿಗಳು ಪ್ರಚಾರದಲ್ಲಿದ್ದು ಅವು ಯಾವುವೆಂದರೆ 1) ಭಾತಖಂಡೆ ಪದ್ಧತಿ, 2) ಪಲುಸ್ಕರ ಪದ್ಧತಿ. ಭಾತಖಂಡೆ ಪದ್ಧತಿಯು ಅತ್ಯಂತ ಸರಳವಾಗಿದ್ದು ಇದು ಸಂಗೀತ ಕ್ಷೇತ್ರದಲ್ಲಿ ವಿಶೇಷವಾಗಿ ಪ್ರಚಾರದಲ್ಲಿದೆ. ಈ ಪದ್ಧತಿಯು ಪ್ರಾರಂಭಿಕ ಸಂಗೀತ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಉಪಯೋಗವಾಗುತ್ತದೆ. ಆದರೆ ಪಲುಸ್ಕರ ಪದ್ಧತಿಯು ಭಾತಖಂಡೆ ಪದ್ಧತಿಗಿಂತ ತೀರ ಭಿನ್ನವಾಗಿದ್ದು ಅತ್ಯಂತ ಕಠಿಣವಾದ ಪದ್ಧತಿಯಾಗಿದ್ದು, ಇದು ಹಿರಿಯ ಸಂಗೀತ ವಿದ್ಯಾರ್ಥಿಗಳಿಗೆ ಉಪಯೋಗವಾಗುತ್ತದೆ.

ಈ ಪದ್ಧತಿಯಲ್ಲಿ ಅರ್ಧಚಂದ್ರಾಕೃತಿಯು "□" ಬಹಳ ಮಹತ್ವದ್ದಾಗಿದೆ. ಕೆಲವೊಂದು ಮಾತ್ರಾಗಳ ನಡುವೆ ಸಮಯವಿದ್ದರೆ "–" ಈ ರೀತಿಯ ಗೆರೆಯನ್ನು ಬರೆಯುವುದು ಮೊದಲಿಗೆ ಪ್ರಚಾರದಲ್ಲಿತ್ತು. ಪ್ರಸ್ತುತವಾಗಿ "□" ಚಿನ್ಹೆಯು ವಿಶೇಷವಾಗಿದೆ. ಉದಾ ಧಾ ತಿರಕಿಟ ಇವು ಆರು ಮಾತ್ರಾಗಳು ಇನ್ನು ತಾಲದ ಸಮ್ ಗುರುತಿನ ಸಲುವಾಗಿ "×" ಚಿನ್ಹೆಯನ್ನು ಹಾಗೂ ಉಳಿದ ಪೆಟ್ಟುಗಳ ಸಲುವಾಗಿ ಆಯಾ ಪೆಟ್ಟುಗಳ ಸಂಖ್ಯೆಯನ್ನು ಬರೆಯಲಾಗುತ್ತದೆ. ಖಾಲಿ ಅಥವಾ ಹುಸಿಯ ಸಲುವಾಗಿ "0" ಚಿನ್ಹೆಯನ್ನು ಆ ಮಾತ್ರಾದ ಕೆಳಭಾಗದಲ್ಲಿ ಬರೆಯಲಾಗುತ್ತದೆ. ವಿಭಾಗ ಗುರುತಿಸುವ ಸಲುವಾಗಿ " | " ಈ ತರದ ಚಿನ್ಹೆ ಬರುತ್ತದೆ.

1. ಶುದ್ಧ ಸ್ವರಗಳಿಗೆ ಮತ್ತು ಮಧ್ಯ ಸಪ್ತಕದ ಸ್ವರಗಳಿಗೆ ಯಾವುದೇ ಚಿನ್ಹೆಗಳಿಲ್ಲ
   ಉದಾ : ಗ ಮ ಪ ದ ನಿ
2. ಕೊಮಲ ಸ್ವರಗಳ ಕೆಳಗೆ ಅಡ್ಡರೇಖೆ ಕೊಡಲಾಗುವುದು
   ಉದಾ : ರೆ̲ ಗ̲ ಧ̲ ನಿ̲
3. ತೀವ್ರ ಮಧ್ಯಮ, ಸ್ವರದ ಮೇಲೆ ಲಂಬರೇಖೆ ಕೊಡಲಾಗುವುದು
   ಉದಾ : ಮ'

4. ಮಂದ್ರ ಸಪ್ತಕದ ಸ್ವರಗಳಿಗೆ ಆಯಾ ಸ್ವರದ ಕೆಳಗೆ ಬಿಂದು ಕೊಡಲಾಗುವುದು
   ಉದಾ : ನಿ̣ ಧ̣ ಪ̣ ಮ̣

5. ತಾರ ಸಪ್ತಕದ ಸ್ವರಗಳ ಮೇಲೆ ಬಿಂದು ಕೊಡಲಾಗುವುದು
   ಉದಾ : ರೆ̇ ಗ̇ ರೆ̇ ಸಾ̇

6. ಸ್ವರವನ್ನು ಎಳೆದು ಹೇಳುವಾಗ ಆಯಾ ಸ್ವರದ ಮುಂದೆ ಅಡ್ಡರೇಖೆ ಕೊಡಲಾಗುವುದು
   ಉದಾ : ಗ – ಮ – ಪ –

7. ಶಬ್ಧವನ್ನು ಎಳೆದು ಹೇಳುವಾಗ ಽ ಆಕಾರದ ಚಿನ್ಹೆ ಕೊಡಲಾಗುವುದು
   ಉದಾ : ಶ್ಯಾಽಽ ಮ ರ

8. ಒಂದಕ್ಕಿಂತ ಹೆಚ್ಚು ಸ್ವರಗಳನ್ನು ಒಂದೇ ಮಾತ್ರದಲ್ಲಿ ಹೇಳುವಾಗ ಸ್ವರದ ಕೆಳಗೆ ಅರ್ಧ ಚಂದ್ರಕೃತಿ ಚಿನ್ಹೆ ಕೊಡಲಾಗುವುದು
   ಉದಾ : ಗಮಪಮ ನಿದಪ ಗಮ

9. ಮೀಂಡ್ ಸ್ವರ ತೋರಿಸುವಾಗ ಚಿನ್ಹೆ '⌒' ತೋರಿಸಲಾಗುವುದು
   ಉದಾ : ಸಾ ಪ

10. ಕಣ ಸ್ವರ ತೋರಿಸುವಾಗ ಮೂಲ ಸ್ವರದ ಮೇಲೆ ಚಿಕ್ಕದಾದ ಮತ್ತೊಂದು ಸ್ವರವನ್ನು ತೋರಿಸಲಾಗುವುದು
    ಉದಾ : ಮ$^{\text{ಗ}}$ದ$^{\text{ಪ}}$

11. ಯಾವುದೇ ಸ್ವರವು ಕೌಂಸಿನಲ್ಲಿದ್ದರೆ ಮೊದಲು ಕೌಂಸಿನ ಮುಂದಿನ ಸ್ವರವನ್ನು ಆನಂತರ ಆ ಸ್ವರದ ಹಿಂದಿನ ಸ್ವರವನ್ನು ನಂತರ ಕೌಂಸಿನಲ್ಲಿದ್ದ ಸ್ವರವನ್ನು ಹೇಳಬೇಕಾದರೆ (ಸಾ) ಈ ಚಿನ್ಹೆ ಕೊಡಲಾಗುವುದು
    ಉದಾ : (ಸಾ) ಎಂದರೆ ರೆಸಾನಿಸಾ ಈ ರೀತಿ ಒಂದೇ ಮಾತ್ರದಲ್ಲಿ ಹೇಳುವುದು

# ಅಧ್ಯಾಯ–8

## ಜನಪದ ಸಂಗೀತ ಮತ್ತು ಕರ್ನಾಟಕದ ವಿವಿಧ ಜನಪದ ಕಲಾ ಪ್ರಕಾರಗಳ ಸಂಕ್ಷಿಪ್ತ ಪರಿಚಯ

ಯಾವುದೇ ಒಂದು ದೇಶದ ಜಾನಪದ ಸಂಗೀತವು ದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಸಂಗೀತದಲ್ಲಿಯ ಸಾತ್ವಿಕ ಭಾವವು ಲೋಕ ಸಂಗೀತ ಅಥವಾ ಜನಪದ ಸಂಗೀತದ ಮಾಧ್ಯಮದಿಂದ ವ್ಯಕ್ತ ಮಾಡಲ್ಪಡುತ್ತದೆ. ಜೀವನ ಹಾಗೂ ಸಂಗೀತದ ನೈಸರ್ಗಿಕ ಸಂಬಂಧದ ಪರಿಚಯ ಯಾವ ರೀತಿ ನಮಗೆ ಜಾನಪದ ಸಂಗೀತದಲ್ಲಿ ದೊರಕುತ್ತದೆಯೋ ಆ ರೀತಿ ಶಾಸ್ತ್ರೀಯ ಸಂಗೀತದಲ್ಲಿ ದೊರಕಲಾರದು. ಜಾನಪದ ಗೀತೆಗಳಿಗೆ ಸಹಜ ಅಥವಾ ಲೋಕಗೀತೆ ಎಂದು ಹೇಳಲಾಗುತ್ತದೆ. ಈ ಗೀತದ ಪ್ರಕಾರವು ಅತ್ಯಂತ ಸರಳವಾಗಿದ್ದು ಕೇವಲ ಅನುಕರಣ ಮಾತ್ರದಿಂದಲೇ ಕಲಿಯಲು ಸಾಧ್ಯ. ಯಾವುದೇ ಪ್ರಕಾರದ ಶಾಸ್ತ್ರೀಯ ಬಂಧನ ಹಾಗೂ ನಿಯಮಗಳು ಇದರಲ್ಲಿ ಇರದಿದ್ದ ಕಾರಣ ಜನ ಸಾಮಾನ್ಯರು ಇದನ್ನು ಸುಲಭವಾಗಿ ಗ್ರಹಿಸಲು ಸಾಧ್ಯ.

ಪ್ರಾಚೀನ ಕಾಲದಿಂದಲೂ ಮಾನವನ ಸಂಬಂಧವು ನಿಸರ್ಗದೊಡನೆ ಅನ್ಯೋನ್ಯವಾಗಿದ್ದರಿಂದ ಅವನ ಪ್ರತಿಯೊಂದು ಕ್ರಿಯೆಯು ಪ್ರಾಕೃತಿಕವಾಗಿತ್ತು. ಯಾವುದೇ ಪರಿಸ್ಥಿತಿಯಲ್ಲಿ ಅವನು ನಿಸರ್ಗದ ಮೊರೆ ಹೋಗುತ್ತಿದ್ದ. ಇದರಿಂದಾಗಿ ಅವನ ಮನೋಭಾವಗಳು ಸಂಗೀತದ ರೂಪಧರಿಸಿ ಹೊರ ಬರುತ್ತಿದ್ದವು. ಆ ಕಾಲದಲ್ಲಿಯ ಸಂಗೀತದಲ್ಲಿ ಸಹಜತೆ ಅಧಿಕವಾಗಿತ್ತು. ಕಾಲಕ್ರಮೇಣ ಮಾನವನು ನಿಸರ್ಗದ ಮೇಲೆ ಪ್ರಭುತ್ವ ಸ್ಥಾಪಿಸಲು ಪ್ರಾರಂಭಿಸಿದನು. ಕಾರಣ ಅವನು ಮೊದಲಿನಂತೆ ನಿಸರ್ಗದ ಮೊರೆಹೋಗುವುದನ್ನು ಕಡಿಮೆ ಮಾಡಲಾರಂಭಿಸಿದ. ಪರಿಣಾಮವಾಗಿ ಪ್ರಕೃತಿಯ ಜೊತೆಗೆ ಅವನ ಸಂಬಂಧ ಕಡಿಮೆಯಾಗಿ ಅವನ ಜೀವನದಲ್ಲಿ ಕೆಲವು ಪರಿವರ್ತನೆಗಳಾಗಲಾರಂಭಿಸಿದವು. ಈ ಪರಿವರ್ತನೆಗಳ ಪ್ರಭಾವವು ಅವನು ನಿರ್ಮಿಸಿದ ಸಂಗೀತದ ಮೇಲೆಯು ಕಂಡು ಬರಲು ಪ್ರಾರಂಭಿಸಿತು.

ಲೋಕ ಜೀವನದ ಅತ್ಯಂತ ಸುಂದರವಾದ ಪ್ರತಿಬಿಂಬವು ಜಾನಪದ ಸಂಗೀತದಲ್ಲಿ ಕಂಡು ಬರುತ್ತದೆ. ಏಕೆಂದರೆ ಜಾನಪದ ಗೀತೆಗಳಲ್ಲಿ "ಶಬ್ದ" ಹಾಗೂ ಸ್ವರಗಳ ಸಂಯೋಜನೆಯಲ್ಲಿ ಕೃತ್ರಿಮತೆ ಇರುವುದಿಲ್ಲ. ಗೀತಗಳಲ್ಲಿ ಲೋಕ ಜೀವನದ ಅತ್ಯಂತ ಸರಳವಾದ ಪರಿಚಯವಿರುತ್ತದೆ. ಅವು ಮಾನವನ ಬಾಹ್ಯ ಜೀವನದ

ಜೊತೆಗೆ ಅವನ ಮಾನಸಿಕ ಭಾವನೆಗಳನ್ನು ಕೂಡ ಸ್ಪಷ್ಟಪಡಿಸುತ್ತವೆ. ಜಾನಪದ ಗೀತಗಳು ಸಂಕ್ಷೀಪ್ತವಾಗಿಯೂ ಸರಳ ವಾಗಿಯೂ, ಸ್ಪಷ್ಟ ವಾಗಿಯೂ ಅನುಭೂತಿಮಯವಾಗಿಯು ಹಾಗೂ ಸಂಗೀತಮಯವಾಗಿಯೂ ಇರುತ್ತವೆ.

ಜಾನಪದ ಗೀತೆಗಳ ಮುಖ್ಯ ಉದ್ದೇಶವು ಜನರ ಮನೋರಂಜನೆಯಾಗಿದ್ದು ವೇದ ಕಾಲದಿಂದ ದೇಶಿ ಸಂಗೀತ ಎಂಬ ನಾಮ ಧರಿಸಿ ಪ್ರಚಾರಕ್ಕೆ ಬಂದವು. ಬೃಹದ್ದೇಶಿ ಎಂಬ ಗ್ರಂಥದ ಕರ್ತನಾದ ಮತಂಗ ಮುನಿಯು ದೇಶೀ ಸಂಗೀತ ಅರ್ಥಾತ್ ಜಾನಪದ ಸಂಗೀತದ ಬಗೆಗೆ ಸಾಕಷ್ಟು ವಿವರಣೆ ನೀಡಿದ್ದಾನೆ. ರಾಮಾಯಣ ಮಹಾಭಾರತ ಕಾಲದಲ್ಲಿಯೂ ವಿವಿಧ ಸಂದರ್ಭಗಳಲ್ಲಿ ಜಾನಪದ ಗೀತಗಳನ್ನು ಹಾಡಲಾಗುತ್ತಿತ್ತು ಎನ್ನುವುದರ ಬಗೆಗೆ ಉಲ್ಲೇಖ ಸಿಗುತ್ತದೆ.

**ಜಾನಪದ ಗೀತೆಗಳ ವೈಶಿಷ್ಟ್ಯತೆ**

ಜಾನಪದ ಗೀತಗಳು ವಿಶೇಷವಾಗಿ ನಾಲ್ಕು ಅಥವಾ ಐದು ಸವರಗಳಲ್ಲಿ ಹಾಡಲ್ಪಡುತ್ತವೆ. ಈ ಗೀತಗಳು ಲಯಬದ್ಧವಾಗಿದ್ದು ಲಯದ ವಿವಿಧ ಪ್ರಕಾರಗಳು ಇದರಲ್ಲಿ ಕಂಡುಬರುತ್ತವೆ. ಜಾನಪದ ಗೀತಗಳಲ್ಲಿ ಯೋಜಿಸಿದ ಸ್ವರಗಳು "ಶಬ್ದ" ಹಾಗೂ ಸಮಯವನ್ನು ಅನುಸರಿಸುತ್ತವೆ. ಶಾಸ್ತ್ರಿಯ ಸಂಗೀತದ ಉತ್ಪತ್ತಿ ಜಾನಪದ ಸಂಗೀತದಿಂದಲೇ ಆಯಿತು ಎಂದು ಹೇಳಲಾಗುತ್ತದೆ. ಜಾನಪದ ಗೀತಗಳು ವಿಶೇಷವಾಗಿ ಸಾಮೂಹಿಕ ರೂಪದಲ್ಲಿ ಹಾಡಲ್ಪಡುತ್ತಿದ್ದು ಇವುಗಳ ಜೊತೆಗೆ ಪ್ರಾದೇಶಿಕ ಪಕ್ಕ ವಾದ್ಯಗಳ ಉಪಯೋಗ ಮಾಡಲಾಗುತ್ತದೆ.

**ಕರ್ನಾಟಕದ ವಿವಿಧ ಜನಪದ ಕಲಾ ಪ್ರಕಾರಗಳು**

ಕರ್ನಾಟಕದಲ್ಲಿ ಜಾನಪದ ಸಂಗೀತದ ಅನೇಕ ಪ್ರಕಾರಗಳು ಕಂಡು ಬರುತ್ತವೆ. ಉದಾ:

**1) ಸಾಂಪ್ರದಾಯಿಕ ಹಾಡುಗಳು:**

ಮನುಷ್ಯನ ಜೀವನದಲ್ಲಿ ಜನನ, ನಾಮಕರಣ, ಕರ್ಣವೇಧ, ವಿವಾಹ ಹಾಗೂ ಮರಣ ಮುಂತಾದ ಸಂದರ್ಭಗಳಲ್ಲಿ ಹಾಡಲ್ಪಡುವ ಗೀತಗಳು ಈ ಗೀತ ಪ್ರಕಾರಗಳಲ್ಲಿ ಬರುತ್ತವೆ.

**2) ಸುಗ್ಗಿಯ ಹಾಡುಗಳು:**

ಈ ಗೀತ ಪ್ರಕಾರವು ಕರ್ನಾಟಕದಲ್ಲಿ ಅತ್ಯಂತ ಲೋಕಪ್ರಿಯವಾಗಿದೆ. ಸುಗ್ಗಿಯ ಹಾಡುಗಳಿಂದ ಬಡಗೂಡಿ ಸುಗ್ಗಿಯ ಕಾಲದಲ್ಲಿ ವಿಶೇಷ ಪ್ರಕಾರದ ಉತ್ಸವವನ್ನು ಆಚರಿಸಲಾಗುತ್ತದೆ. ಭೂದೇವಿಯ ಸ್ತುತಿ, ಮಳೆರಾಯನ ಆರಾಧನೆ ನಂತರ ಹೊಲದಲ್ಲಿದ್ದ ಧಾನ್ಯ ರಾಶಿ ನೋಡಿ ಆಗುವ ಆನಂದಕ್ಕೆ ಹಾಗೂ ರೈತ ಸಮಾಜದಲ್ಲಿ ದಿನಂಪ್ರತಿ ನಡೆಯುವ ಘಟನೆಗಳ ವರ್ಣನೆ ಈ ಗೀತಗಳ ವಸ್ತುಗಳಾಗಿರುತ್ತವೆ.

**3) ಪೌರಾಣಿಕ ಗೀತಗಳು:**

ಪುರಾಣ ಕಥೆಗಳ ಮೇಲೆ ಆಧಾರಗೊಂಡ ಗೀತಗಳು ಈ ಪ್ರಕಾರಗಳಾಗಿವೆ. ಉದಾ: ರಾಮ, ಕೃಷ್ಣ ಹಾಗೂ ಪಾಂಡವರ ಪರಾಕ್ರಮದ ಕಥೆ. ಶ್ರೀಕೃಷ್ಣಲೀಲಾ ಮುಂತಾದ ಸಂಗತಿಗಳು ಈ ಗೀತಗಳ ವಸ್ತುಗಳಾಗಿರುತ್ತವೆ.

**4) ಕಸಬಿನ ಹಾಡುಗಳು:**

ದೈನಂದಿನ ಕಾರ್ಯ ಮಾಡುವಾಗ ಶ್ರಮ ಪರಿಹಾರರ್ಥವಾಗಿ ಹಾಗೂ ಸ್ಫೂರ್ತಿಗಾಗಿ ಕೆಲವು ಗೀತಗಳನ್ನು ಹಾಡಲಾಗುತ್ತದೆ. ಇವುಗಳಲ್ಲಿ ಗೋಪಾಲಕರ ಗೀತೆಗಳು, ಅಂಬಿಗರ ಹಾಡುಗಳು, ಕಮ್ಮಾರನ ಹಾಡುಗಳು, ಅಗಸರ ಹಾಡುಗಳು, ಕಲ್ಲು ಕುಟಿಗರ ಹಾಡುಗಳು ಈ ಪ್ರಕಾರದ ಅನೇಕ ಶಾರೀರಿಕ ಶ್ರಮಗಳ ಕಾರ್ಯದಲ್ಲಿ ಹಾಡುವ ಗೀತಗಳು ಇದರಲ್ಲಿ ಒಳಗೊಂಡಿವೆ.

**5) ನೀತಿ ಹಾಡುಗಳು:**

ಜನರಿಗೆ ನೀತಿ ಪಾಠ ಕಲಿಸುವುದಕ್ಕಾಗಿ ಅನೇಕ ಗೀತ ರಚನೆಗಳಾದವು. ನಿತ್ಯ ಜೀವನದಲ್ಲಿ ಹೇಗಿರಬೇಕು, ಹೇಗೆ ಬಾಂಧವ್ಯ ನೀಡಬೇಕು. ಹೇಗೆ ಪಾರಮಾರ್ಥವನ್ನು ಸಾಧಿಸಬೇಕು. ಅಲ್ಲದೆ ಧರ್ಮ, ನುಡಿ, ನಡತೆ ಮುಂತಾದ ಸಂಗತಿಗಳನ್ನು ಬೋಧಿಸಿ ಜನರ ಕಲ್ಯಾಣಕ್ಕಾಗಿ ಈ ಗೀತಗಳು ರಚಿಸಲ್ಪಟ್ಟಿವೆ. ಕನ್ನಡದಲ್ಲಿಯ ವಚನ ಸಾಹಿತ್ಯದ ಕೆಲಭಾಗಗಳು ಇಂತಹ ಹಾಡುಗಳಿಗೆ ಒಂದು ಉತ್ತಮ ನಿದರ್ಶನ ಎಂದು ಹೇಳಬಹುದು.

**6) ಜೋಗುಳ ಹಾಡುಗಳು:**

ತಾಯಂದಿರು ತಮ್ಮ ಮಕ್ಕಳಿಗೆ ಹಾಲುಣಿಸುವಾಗ ಹಾಗೂ ಅವರನ್ನು ಮಲಗಿಸುವುದಕ್ಕಾಗಿ ಹಾಡು ಹೇಳುತ್ತಾರೆ. ಇವು ಜೋಗುಳದ ಹಾಡುಗಳೆಂದು ಹೇಳಲ್ಪಡುತ್ತವೆ.

**7) ಪವಾಡದ ಹಾಡುಗಳು:**

ಈ ಹಾಡುಗಳಲ್ಲಿ ಶೂರ, ಪರಾಕ್ರಮಿ ವೀರರ ವರ್ಣನೆ, ರಾಜನ ವರ್ಣನೆ, ಪ್ರಸಿದ್ಧ ವ್ಯಕ್ತಿಗಳ ವರ್ಣನೆ ಮುಂತಾದ ವಿಷಯಗಳು ವರ್ಣಿಸಲ್ಪಡುತ್ತವೆ.

ಇದರ ಹೊರತಾಗಿ ಶೃಂಗಾರದ ಹಾಡುಗಳು, ಒಗಟಿನ ಹಾಡುಗಳು, ಭಕ್ತಿ ಹಾಡುಗಳು, ಆರತಿ ಹಾಡುಗಳು, ಅಲ್ಲದೆ ಶಕ್ತಿ ಪೂಜೆ, ಕಾಳಿ ಪೂಜೆ, ಅನಾಗತ ಗೃಹ ನಿವಾರಣೆ, ಪೈಶಾಚಿರ ಪೂಜೆ ಮುಂತಾದ ಸಂದರ್ಭಗಳ್ಲಿ ಹಾಡುವ ಹಾಡುಗಳಲ್ಲದೇ ಹಸ್ತ ಸಾಮುದ್ರಿಕ ಹೇಳುವಾಗ ಹಾಡುವ ಗೀತ, ಕೊರವಂಜಿ ಹಾಡು, ಗಿಡಮೂಲಿಕೆ, ಔಷಧ ಪ್ರಯೋಗ ಮಾಡುವಾಗ ಹಾಡುವ ಹಾಡುಗಳು ಮುಂತಾದ ಅನೇಕ ಜಾನಪದ ಗೀತೆಗಳ ಪ್ರಕಾರಗಳು ಕರ್ನಾಟಕದಲ್ಲಿ ಪ್ರಚಲಿತ ಇವೆ.



# ಅಧ್ಯಾಯ–9

## ಹಿಂದೂಸ್ತಾನಿ ಸಂಗೀತದ ಗೇಯ ಪ್ರಕಾರಗಳ ಪರಿಚಯ

ಅಸಾಮಾನ್ಯ ಕರ್ತೃತ್ವ ಶಕ್ತಿಯುಳ್ಳ ಸಂಗೀತ ವಿದ್ವಾಂಸರುಗಳು ತಮ್ಮ ಪ್ರತಿಭಾ ವಿಶೇಷದಿಂದ ಸಂಗೀತ ಕಲೆಯಲ್ಲಿ ವಿಭಿನ್ನವಾದ, ವೈವಿಧ್ಯಮಯವಾದ ಸಂಗೀತ ಶೈಲಿಗಳನ್ನು ಪ್ರಚಾರಗೊಳಿಸಿದ್ದಾರೆ. ಹಿಂದೂಸ್ತಾನಿ ಸಂಗೀತದಲ್ಲಿ ವೈಶಿಷ್ಟ್ಯಪೂರ್ಣವಾದ ವಿವಿಧ ಸಂಗೀತ ಶೈಲಿಗಳಿದ್ದು ಇಂತಹ ಕೆಲವು ಪ್ರಮುಖ ಗಾಯನ ಪದ್ಧತಿಗಳು ಅಥವಾ ಗೇಯ ಪ್ರಕಾರಗಳು ಹೀಗಿವೆ.

1. **ಧ್ರುಪದ:** ಈ ಗಾಯನ ಶೈಲಿಯು ಪೌರುಷಯುಕ್ತ ಪ್ರಭಾವಶಾಲೀ ಕಂಠಕ್ಕೆ ಸರಿಹೊಂದುವಂತಹದ್ದಾಗಿದೆ. ಆಯಾ ರಾಗದ ಸ್ವರ, ತಾಲ, ಲಯಗಳು ಕರಾರುವಾಕ್ಕಾಗಿ, ಖಚಿತವಾಗಿ ಪರಿಪಾಲಿಸಲ್ಪಡುತ್ತದೆ. ಈ ಗಾಯನ ಶೈಲಿಯ ಸಂಯೋಜನೆಯಲ್ಲಿ ಅತಿ ಕಟ್ಟುನಿಟ್ಟಾದ ನಿಯಮ ನಿಷ್ಠೆಯನ್ನು ಪಾಲಿಸಲಾಗುತ್ತದೆ. ಇಲ್ಲಿ ಗಮಕ, ಬೋಲ್ತಾನ್, ಲಯದ ದುಗುನ್, ತಿಗುನ, ಚೌಗುನ್, ಅಠಗುನ್ ಇತ್ಯಾದಿ ವೈವಿಧ್ಯಮಯ ಲಯದ ಲೆಕ್ಕಾಚಾರದ ಸಂಗತಿಗಳು ಒಳಗೊಂಡಿವೆ. ಧ್ರುಪದ ಗಾಯನ ಪ್ರಕಾರದಲ್ಲಿ ಸಾಹಿತ್ಯವು ವಿಶೇಷವಾಗಿ ಹಿಂದಿ, ಉರ್ದು ಹಾಗೂ ಬ್ರಿಜ ಭಾಷೆಗಳಲ್ಲಿದ್ದು, ಶೃಂಗಾರ, ಗಂಭೀರ, ವೀರ, ಶಾಂತ ಹಾಗೂ ಭಕ್ತಿರಸ ಪ್ರಧಾನವಾಗಿ ಕಂಡುಬರುತ್ತದೆ. ಗಾಯನದ ಪ್ರಾರಂಭವು "ನೋಂ ತೋಂ"ದಿಂದಾಗುತ್ತದೆ. ಧ್ರುಪದ ಗಾಯನ ಶೈಲಿಯ ಗಂಭೀರತೆಗೆ ಹೊಂದಿಕೊಂಡು ಪಬಾವಜ ವಾದ್ಯವು ಸಾಥೀವಾದ್ಯವಾಗಿ ವಿಶೇಷ ಮೆಚ್ಚುಗೆಯನ್ನು ಪಡೆದು ಪ್ರಚಾರದಲ್ಲಿ ಬಂದಿದೆ. ಸ್ವಾಭಾವಿಕವಾಗಿಯೇ ಪಖಾವಜ ವಾದ್ಯದ ನುಡಿತದಿಂದ ಹೊರಹೊಮ್ಮುವ ಬೋಲುಗಳು ಬಹು ಗಂಭೀರವಾಗಿರುವ ಕಾರಣ ಈ ಗಾಯನ ಶೈಲಿಯ ಗಂಭೀರತೆಯನ್ನು ಇನ್ನಷ್ಟು ಪ್ರಜ್ವಲಿಸುತ್ತದೆ. ಚೌತಾಲ, ಧಮಾರ, ಸವಾರಿ, ಸೂಲತಾಲ, ರುದ್ರತಾಲ ಇತ್ಯಾದಿಗಳು ಧ್ರುಪದ ಶೈಲಿಗೆ ಸುಭದ್ರವಾದ ಲಯದ ಚೌಕಟ್ಟನ್ನು ನೀಡುವಂತಹ ತಾಲಗಳಾಗಿವೆ.

ಗ್ವಾಲಿಯರ್‌ದ ರಾಜಾ ಮಾನಸಿಂಹ ತೋಮರ ಅವರಿಂದ ಪ್ರಚಾರದಲ್ಲಿ ಬಂದಿತೆಂದು ಹೇಳಲಾಗುವ ಈ ಗಾಯನ ಪ್ರಕಾರದಲ್ಲಿ ಸಂಗೀತ ಸಾಮ್ರಾಟ ತಾನಸೇನ, ಗುರುಗಳಾದ ಸ್ವಾಮಿ ಹರಿದಾಸ, ವೈಜನಾಥ(ಬೈಜೂ ಬಾವರಾ), ಗೋಪಲ ನಾಯಕ ಮುಂತಾದವರು ನಿಷ್ಣಾತರಾಗಿದ್ದರು. ಧ್ರುಪದ ಗಾಯನ

ಶೈಲಿಯಲ್ಲಿ ನಾಮಾಂಕಿತ ಕಲಾವಂತರ ಶೈಲಿಯ ವೈಶಿಷ್ಟ್ಯಗಳನ್ನನುಸರಿಸಿ 4 “ವಾಣಿಗಳು”(ಬಾನಿಗಳು) ಪ್ರಚಾರದಲ್ಲಿ ಬಂದಿವೆ.

ಅವು: 1). ಗೋಬರ ಹರಿವಾಣಿ ಅಥವಾ ಶುದ್ಧವಾಣಿ

2). ಖಂಡಾರವಾಣಿ

3). ಡಾಗರವಾಣಿ ಹಾಗೂ

4). ನೋಹರವಾಣಿ

**2. ಖ್ಯಾಲ ಅಥವಾ ಖಯಾಲ:** ಇದು ಫಾರಸೀ ಶಬ್ದವಾಗಿದ್ದು ‘ಕಲ್ಪನೆ’ ಎಂದು ಅರ್ಥವಾಗುತ್ತದೆ. ಈ ಗಾಯನ ಪ್ರಕಾರದಲ್ಲಿ ಗಾಯಕರಿಗೆ ತಮ್ಮ ತಮ್ಮ ಕಲ್ಪನಾ ಲಹರಿಯಲ್ಲಿ ವಿಹರಿಸಲು ಸಾಕಷ್ಟು ಅವಕಾಶವಿರುವುದರಿಂದ ಖಯಾಲ ಅಥವಾ ಖಯಾಲ ಎಂಬ ಶಬ್ದವು ಸೂಕ್ತವಾಗಿ ಪ್ರಸಿದ್ಧಿ ಪಡೆಯಿತು. ಖ್ಯಾಲ ಗಾಯನದಲ್ಲಿ ಪ್ರಾರಂಭದಲ್ಲಿ ಆಲಾಪವಿದ್ದರೂ ಅದು ಕೇವಲ ರಾಗಸ್ವರೂಪವನ್ನು ಪ್ರಕಟಿಸಲು ಮಾತ್ರವಾಗಿದ್ದು ಆಲಾಪದ ಪರಿಪೂರ್ಣ ರಚನೆಯು ಹಾಡಿನೊಂದಿಗೇ ಪ್ರಾರಂಭಗೊಳ್ಳುತ್ತದೆ. ಸಶಾಸ್ತ್ರೀಯವಾಗಿದ್ದರೂ ಈ ಗಾಯನ ಪ್ರಕಾರವು ಧ್ರುಪದ ಶೈಲಿಯಷ್ಟು ಕಟ್ಟು ನಿಟ್ಟಿನ ನಿಯಮ ಹೊಂದಿಲ್ಲದಿರುವುದರಿಂದ ಇಲ್ಲಿ ಗಾಯಕರು ತಮ್ಮ ಕಲ್ಪನೆಗಳನ್ನು ರಾಗಾಲಾಪ ಹಾಗೂ ವಿಸ್ತಾರಗಳಿಂದ ವ್ಯಕ್ತಪಡಿಸುವರು.

ಖ್ಯಾಲ ಗಾಯನದಲ್ಲಿ ಮುಖ್ಯವಾಗಿ ಬಡಾಖ್ಯಾಲ ಅಥವಾ ವಿಲಂಬಿತ ಖ್ಯಾಲ ಮತ್ತು ಛೋಟಾಖ್ಯಾಲ ಅಥವಾ ಧ್ರುತ್ ಖ್ಯಾಲ ಎಂದು 2 ಭಾಗಗಳಿವೆ. ಬಡಾಖ್ಯಾಲನ್ನು ವಿಲಂಬಿತ ಲಯದಲ್ಲಿ ಏಕತಾಲ, ತೀನ್‌ತಾಲ, ಝೂಮ್ರಾ, ತಿಲವಾಡ, ಸವಾರಿ, ಝುಪ್ತಾಲ ಇತ್ಯಾದಿಗಳಲ್ಲೂ ಛೋಟಾ ಖ್ಯಾಲನ್ನು ಧ್ರುತ್ ತೀನ್‌ತಾಲ, ಏಕ್ತಾಲ, ಝುಪ್ತಾಲಾದಿಗಳಲ್ಲಿ ಹಾಡಲಾಗುತ್ತದೆ. ಆಧುನಿಕ ಹಿಂದೂಸ್ತಾನೀ ಸಂಗೀತ ಪದ್ಧತಿಯಲ್ಲಿ ಖ್ಯಾಲ ಗಾಯನ ಶೈಲಿಯು ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದ್ದು ಜನಪ್ರಿಯವಾದ ಒಂದು ಗಾಯನ ಪ್ರಕಾರವಾಗಿದೆ.

ಅಮೀರ ಖುಸ್ರೋನಿಂದ ಪ್ರಚಾರಕ್ಕೆ ಬಂದಿತೆಂದು ಹೇಳಲಾಗುವ ಈ ಪ್ರಕಾರವು ಮುಂದೆ “ಸದಾರಂಗ” ಹಾಗೂ “ಅದಾರಂಗ” ಎಂಬ ಉದ್ಧಾಮ ಕವಿಗಳೂ, ವಿಧ್ವಾಂಸರಿಂದ ಖ್ಯಾಲ ಗಾಯನಕ್ಕೆ ಬೇಕಾದ ಸಾವಿರಾರು

ಗೀತರಚನೆಗಳು ಸಿದ್ಧಗೊಂಡು ಅವರ ಶಿಷ್ಯ, ಪ್ರಶಿಷ್ಯರಿಂದ ವಿಶೇಷ ಪ್ರಚಾರಗೊಂಡಿತು, ಖ್ಯಾಲ ಗಾಯನದ ಪ್ರಚಾರ ಮತ್ತು ಜನಪ್ರಿಯತೆಯ ಶ್ರೇಯಸ್ಸು ಸದಾರಂಗ ಹಾಗೂ ಅದಾರಂಗ ಅವರಿಗೆ ಸಲ್ಲುತ್ತದೆ.

**3. ಭಜನ್:** ಭಜನ್ ಗೀತೆಗಳು ಭಕ್ತಿರಸ ಪ್ರಧಾನವಾದವುಗಳಾಗಿವೆ. ಅವುಗಳಲ್ಲಿ ದೇವರ ಗುಣವರ್ಣನೆಯಿದ್ದು, ಭಕ್ತಿಯಿಂದ ಭಗವನ್ನಾಮಸ್ಮರಣೆಯನ್ನು ಮಾಡುವ ಒಂದು ಗಾಯನ ಪ್ರಕಾರವಾಗಿದೆ. ಇಲ್ಲಿ ಗೀತೆಗಳಿಗೆ ರಾಗ, ತಾಲದ ಯಾವ ನಿರ್ದಿಷ್ಟ ಬಂಧನವೂ ಇರುವದಿಲ್ಲ. ಇವುಗಳನ್ನು ಯಾವುದೇ ಒಂದು ರಾಗದಲ್ಲಾಗಲೀ ಇಲ್ಲವೇ ಸಮ್ಮಿಶ್ರ ರಾಗಗಳಲ್ಲಾಗಲಿ ಹಾಡಬಹುದಾಗಿದೆ. ಭಕ್ತಿ ಪ್ರಕಾರದ ಗೀತ ರಚನೆಗಳು ಭಕ್ತಿ, ಜ್ಞಾನ, ವೈರಾಗ್ಯ ತತ್ವಗಳನ್ನು ಸೂಚಿಸುವ ಭಗವಂತನಲ್ಲಿ ತನ್ನ ಭಕ್ತಿ ಭಾವವನ್ನು ತೋರ್ಪಡಿಸುವದ್ದಾಗಿದೆ. ಭಾರತೀಯ ಪ್ರತಿಯೊಂದು ಧರ್ಮದಲ್ಲಿಯೂ ಇಂಥ ಭಕ್ತಿಗೀತೆಗಳ ಸಾವಿರಾರು ರಚನೆಗಳು ಕಂಡುಬರುತ್ತಿದ್ದು ಅವು ವೀಶೇಷವಾಗಿ, ತೀನ್‌ತಾಲ, ಕೆಹರವಾ, ದಾದರಾ, ಧುಮಾಳಿ, ರೂಪಕ ಇತ್ಯಾದಿ ತಾಲಗಳಲ್ಲಿ ಹಾಡಲಾಗುತ್ತದೆ.

**4. ವಚನ:** ವಿವಿಧ ಶರಣರು ತಮ್ಮ ಅನುಭವ ನುಡಿಗಳ್ನು ಜನಸಾಮಾನ್ಯರಿಗೆ ತಲುಪಿಸುವ ಕಾಯಕವನ್ನು ವಚನಗಳ ಮೂಲಕ ಮಾಡಿದರು. ಕಾಲ ಕ್ರಮೇಣ ವಚನಗಳು ಗಾಯನ ಶೈಲಿಯ ರೂಪ ಪಡೆದು ಪ್ರಚಾರಗೊಂಡವು. ಅನುಭವದ ನುಡಿಗಳನ್ನು ಗಾಯನ ರೂಪದಲ್ಲಿ ಹಾಡುವ ಪದ್ಧತಿಯನ್ನು ವಚನ ಗಾಯನ ಪ್ರಕಾರವೆನ್ನಬಹುದಾಗಿದೆ. ಬಸವಣ್ಣ, ಅಕ್ಕಮಹಾದೇವಿ, ಜೇಡರ ದಾಸಿಮಯ್ಯ ಮುಂತಾದವರು ವಚನ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹಾನುಭಾವರಾಗಿದ್ದಾರೆ. ಹಿಂದೂಸ್ತಾನಿ ಗಾಯನದ ಕಾರ್ಯಕ್ರಮದಲ್ಲಿ ಶ್ರೋತೃಗಳ ಅಪೇಕ್ಷೆ ಅಥವಾ ಗಾಯಕರ ಇಚ್ಛೆಯಂತೆ ವಚನಗಳನ್ನು ಹಾಡುವ ಪರಿಪಾಠ ಬೆಳೆದು ಬಂದಿದ್ದು, ವಚನ ಗಾಯನದ ಪ್ರತ್ಯೇಕ ಕಾರ್ಯಕ್ರಮಗಳೂ ಸಹ ಇತ್ತೀಚೆಗೆ ನಡೆದುಕೊಂಡು ಬಂದಿದೆ. ಮಾನವನ ಯಾಂತ್ರಿಕ ಬದುಕು, ಆಡಂಬರದ ಜೀವನ, ತಾನು, ತನ್ನದು ಎಂಬ ಹಪಹಪಿಕೆಯನ್ನೆಲ್ಲ ವಿಡಂಬನೆ ಮಾಡಿ ನಿಜ ಅರ್ಥದಲ್ಲಿ ಮಾನವನ ಜೀವನದ ಅರ್ಥ, ಬದುಕಬೇಕಾದ ರೀತಿ, ಈ ಜೀವನದ ಸಾರ್ಥಕತೆಯನ್ನು ಕುರಿತು ಸರಳವಾಗಿ ಜನ ಸಾಮಾನ್ಯರಿಗೂ

ಅರ್ಥವಾಗುವ ರೀತಿಯಲ್ಲಿ ತಿಳಿಸುವ ವಚನಗಾಯನ ಪ್ರಕಾರವು ಶ್ರೇಷ್ಠವಾಗಿ ಕಂಡುಬರುತ್ತದೆ.

**5. ಭಾವಗೀತೆ:** ಇದನ್ನು ಭಜನ್‌ದಂತೆಯೇ ಹಾಡಲು ಬರುವುದಾದರೂ ರಚನಾ ಉದ್ದೇಶದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಈ ಗಾಯನ ಪ್ರಕಾರವು ಭಾವನಾ ಪ್ರಧಾನವಾದ ಒಂದು ಶೈಲಿಯಾಗಿದೆ. ವಿವಿಧ ಸಾಹಿತ್ಯ ಕ್ಷೇತ್ರದ, ಹಲವು ಕವನಗಳನ್ನ ಅವುಗಳ ಅರ್ಥಕ್ಕೆ ಪ್ರಾಧಾನ್ಯತೆ ನೀಡಿ ಆಯಾ ಕವಿಗಳ ಕಲ್ಪನೆಯನ್ನು ಪ್ರಭಾವಿಯಾಗಿ ಮನ ಮುಟ್ಟುವಂತೆ ಹೇಳುವ ಪದ್ಧತಿಯು ಈ ಭಾವಗೀತ ಗಾಯನ ಪ್ರಕಾರದಲ್ಲಿ ಕಂಡುಬರುತ್ತದೆ. ಸ್ವರ ಮಾಧುರ್ಯದೊಂದಿಗೆ ಸುಲಭ ತಾಲಗತಿಯಲ್ಲಿ ಭಾವನಾತ್ಮಕವಾಗಿ ಹಾಡುವ ಶೈಲಿಯು ವಿಶೇಷವಾಗಿದೆ. ಹೀಗೆ ಕ್ಲಿಷ್ಟವಲ್ಲದ, ಸಂಗೀತ ಶಾಸ್ತ್ರ ನಿರ್ಬಂದವು ವಿಶೇಷವಾಗಿಲ್ಲದ ಈ ಗೀತ ಪ್ರಕಾರವು ಬಹು ಸಂಖ್ಯೆಯ ಜನಸಾಮಾನ್ಯರನ್ನು ರಂಜಿಸುವ ಶೈಲಿಯಲ್ಲದೇ ಆಧುನಿಕ ಯುಗದಲ್ಲಿ ವಿಶೇಷವಾಗಿ ಯುವ ಜನಾಂಗದಲ್ಲಿ ಜನಪ್ರಿಯ ಶೀತ ಪ್ರಕಾರವಾಗಿದೆಯೆಂದೆನ್ನಬಹುದಾಗಿದೆ.

**6. ದಾಸರ ಪದ:** ದಾಸಕೂಟದವರಿಂದ ಕನ್ನಡ ಭಾಷೆಯಲ್ಲಿ ರಚಿತವಾಗಿ ಪ್ರಚಾರಗೊಂಡ ಪದ್ಧತಿ ಇದಾಗಿದೆ. ದಾಸರ ಪದಗಳಲ್ಲಿ ಭಗವದ್ಭಕ್ತಿ, ವೇದಾಂತ ತತ್ವ ಹಾಗೂ ಆಧ್ಯಾತ್ಮಿಕ ವಿಷಯಗಳು ಅಡಕವಾಗಿದೆ. ಇದರ ಸಂಗೀತ ಶೈಲಿಯು ಸುಲಭವಾಗಿದ್ದು, ಸಾಹಿತ್ಯ ವಿಷಯ ಪ್ರಧಾನವಾಗಿರುತ್ತದೆ. ಜನಸಾಮಾನ್ಯರೂ ಸುಲಭದಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವಂತೆ ಸರಳ ಶೈಲಿಯಲ್ಲಿ ರಚಿಸಲ್ಪಟ್ಟ ದಾಸರ ಪದಗಳು ಮಾನವನು ತನ್ನ ಜೀವನವನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗುವಂತೆ ಪ್ರೇರೇಪಿಸುತ್ತದೆ. ಪುರಂದರ ದಾಸರು, ಕನಕ ದಾಸರಂತಹ ದಾಸವರೇಣ್ಯರು ಜೀವನ ಅನುಭವವಗಳನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ತಿಳಿಸುವ ಮೂಲಕ, ಸಾಮಾನ್ಯರೂ ಹಾಡಬಹುದಾದಂತಹ ಸುಲಭ ಗೇಯ ಪ್ರಕಾರವನ್ನು ಪ್ರಚಾರಪಡಿಸಿದ್ದಾರೆ.

ಒಟ್ಟಿನಲ್ಲಿ ಭಕ್ತಿಪ್ರಧಾನ ರಸದೊಂದಿಗೆ ರಂಜನೀಯವಾಗಿ, ಹೇಳುವವನ ಹಾಗೂ ಕೇಳುವವರ ಮನಸ್ಸನ್ನು ಧಾರ್ಮಿಕ ಭಾವನೆಯ ಕಡೆಗೆ ಸೆಳೆಯುವುದೇ ಈ ಗಾಯನ ಪ್ರಕಾರದ ಧ್ಯೇಯವಾಗಿದೆ.

***

# ಅಧ್ಯಾಯ-10

## ಸಂಗೀತದಿಂದಾಗುವ ಪ್ರಯೋಜನಗಳು

ಸಂಗೀತ ಒಂದು ಸುಂದರ, ಅದ್ಭುತ, ಅಲ್ಹಾದಕರ, ರಮ್ಯವಾದ ಜಗತ್ತು ಸಂಗೀತವು ಒಂದು ಅದ್ಭುತ ಪರಿಣಾಮವನ್ನುಟುಂಮಾಡುವ ಮಹಾಶಕ್ತಿಯನ್ನು ಹೊಂದಿದೆ. ಇದರಲ್ಲಿ ಎಳ್ಳಷ್ಟು ಸಂಶಯುವಿಲ್ಲ. ಕಣ್ಣಿಗೆ ಕಾಣದ ಈ ಮಹಾಶಕ್ತಿಯನ್ನು ವರ್ಣಿಸಲು ಅಸಾಧ್ಯ ಕಾರಣ ಸಂಗೀತದ ಶಕ್ತಿಯನ್ನು ಅನುಭವದಿಂದ ಅನುಭವಿಸಬೇಕಾಗುತ್ತದೆ ಸಂಗೀತದ ಮೂಲ ಉದ್ದೇಶ ಶ್ರೋತೃಗಳಿಗೆ ಆನಂದ ನೀಡುವುದು ಅಷ್ಟೇ ಅಲ್ಲ, ಸಂಗೀತವನ್ನು ಒಂದು ಮಹಾದಿವ್ಯ ಔಷಧಿ ಮತ್ತು ಸಂಜೀವಿನಿ ಎಂದೂ ಕರೆದಿದ್ದಾರೆ.

ಸಂಗೀತವನ್ನು ದೇವರಲ್ಲಿ ಗಂಧರ್ವರಲ್ಲಿ, ಮಾನವರಲ್ಲಿ, ದಾನವರಲ್ಲಿ ನೋಡುವುದಲ್ಲದೇ ಭಾರತದ ಪ್ರಾಚೀನ ಮಹಾಕಾವ್ಯಗಳಾದ ಮಹಾಭಾರತ, ರಾಮಾಯಣ ಪುರಾಣ, ಪುಣ್ಯಚರಿತ್ರೆಗಳಲ್ಲಿ ಯೂ ಕೂಡ ಸಂಗೀತದ ವರ್ಣನೆಯನ್ನು ಕಾಣುತ್ತೇವೆ ಅಷ್ಟೇ ಅಲ್ಲ ಅಳುತ್ತಿರುವ ಮಗುವನ್ನು ತೊಡೆಯ ಮೇಲೆ ಇರಿಸಿ ಜೋಗುಳ ಪದವನ್ನು ತಾಯಿ ಗುನುಗುನು ಹಾಡಿದಾಗ ಮಗು ಸುಮ್ಮನಾಗಿ ಮಲಗಿಬಿಡುತ್ತದೆ ಅಂದರೆ ಅರಿವಿಲ್ಲದೆ ಮಗುವಿನ ಮೇಲೂ ಸಂಗೀತವು ಪ್ರಭಾವ ಬೀರುತ್ತದೆ. ಸಂಗೀತದಲ್ಲಿ ಸ್ವರವಿಸ್ತರದ ಮಧುರ ನಾದದಿಂದ ಪ್ರಕೃತಿಯಲ್ಲಿಯ ಚೇತನ ಮತ್ತು ಅಚೇತನ (ಸಮಸ್ತ ಪ್ರಾಣಿಗಳು ಮತ್ತು ಸಸ್ಯವರ್ಗ) ಮುಗ್ಧವಾಗುತ್ತದೆ ಎಂಬುದು ವೈಜ್ಞಾನಿಕ ಸತ್ಯ ಸಸ್ಯವರ್ಗಗಳು ಪಲ್ಲವಿಸುತ್ತವೆ ದನ-ಕರುಗಳು ಅಧಿಕ ಹಾಲು ನೀಡುತ್ತವೆ ಎಂದು ಪ್ರಯೋಗ ಮಾಡಿ ಸಿದ್ಧಮಾಡಿದ್ದಾರೆ.

ಜೀವನದಲ್ಲಿ ಅಸಮಾಧಾನ, ಅಸಹಾಯಕತೆ, ಅಶಾಂತಿ, ಮಾನಸಿಕ ಒತ್ತಡ, ರಕ್ತದೊತ್ತಡ, ನಿದ್ದೆಗೇಡಿತನ ಮುಂತಾದವುಗಳು ಹೀಗೆ ಆಧುನಿಕ ಜೀವನದಲ್ಲಿ ಸಾಮಾನ್ಯವಾಗಿದೆ. ಜನರ ಜೀವನ ಎನ್ನುವುದು ರೋಗದ ತವರುಮನೆಯಾಗಿದೆ. ಈ ಎಲ್ಲ ರೋಗಗಳನ್ನು ಓಡಿಸಿ, ಮಾನಸಿಕ ಹಾಗೂ ದೈಹಿಕ ಒತ್ತಡವನ್ನು ಸಮತೋಲನದಲ್ಲಿಡುವ ಮಹಾದಿವ್ಯ ಔಷದಿಯು ಸಂಗೀತದಲ್ಲಿ ಅಡಗಿದೆ ಎನ್ನುವುದನ್ನು ಅರಿತ ಜನರು ಸಂಗೀತಕ್ಕೆ ಮೊರೆ ಹೋಗಿದ್ದಾರೆ. ಅಷ್ಟೇ ಅಲ್ಲ ಇತ್ತಿತ್ತಲಾಗಿ ಪಾರ್ಶ್ವವಾಯು ಪೀಡೀತ ರೋಗಿಗಳನ್ನು ಈ ಸಂಗೀತದಿಂದ ಗುಣ ಪಡಿಸಿಸುತ್ತಿದ್ದಾರಲ್ಲದೇ, ವಿವಿಧ ರಾಗಮಾಲಿಕೆಗಳ

ಮೂಲಕ ರೋಗಿಗಳ ಮೇಲೆ ಚಿಕಿತ್ಸೆಕೂಡ ನಡೆಸುತ್ತಿದ್ದಾರೆ. ಶ್ವಾಸಕೋಶದ ತೊಂದರೆ, ಅಸ್ಥಮಾ, ತಲೆನೋವು, ಯಾವುದೇ ಇರಲಿ ಸಂಗೀತದ ಶೃತಿ ಅದನ್ನು ವಾಸಿಮಾಡಿಬಿಡುತ್ತದೆ ಸರಿಯಾದ ಸ್ವರಹಾಕಿದರೆ ಸಮಸ್ಯೆ ತಾನೇ ತಾನಾಗಿ ದೂರವಾಗುತ್ತದೆ ಬೇರೆ ಬೇರೆ ರಾಗಗಳು ಪ್ರಾಣಾಯಮದ ಬೇರೆ ಬೇರೆ ರೀತಿಗಳಂತೆ ಕೆಲಸ ಮಾಡುತ್ತವೆ. ತತ್ಪರಿಣಾಮವಾಗಿ ಶ್ವಾಸಕೋಶಕ್ಕೆ ಸಂಬಂಧಪಟ್ಟ ಅಸ್ಥಮಾದಂತಹ ಕಾಯಿಲೆಗಳು ವಾಸಿಯಾಗುತ್ತವೆ. ತಲೆನೋವು, ನಿದ್ರಾಹೀನತೆಗೂ ಸಂಗೀತ ರಾಮಬಾಣ, ಅಸ್ತಮಕ್ಕೆ ರಾಗ ದರಬಾರಿಕಾನಡಾ ರಾಮಬಾಣವಾದರೆ, ರಾಗ ಬಸಂತ ತಲೆಬೇನೆಯನ್ನು ಹೊಡೆದೋಡಿಸುತ್ತದೆ ರೋಗಿ ಸ್ವತಃ ಹಾಡುವುದರಿಂದ 75%ರಷ್ಟು ಗುಣವಾಗುತ್ತದೆ ಬೇರೆಯವರ ಗಾಯನವನ್ನು ಕೇಳುವುದರಿಂದ 25%ರಷ್ಟು ಪ್ರಯೋಜನ ಉಂಟಾಗುತ್ತದೆ. ಕಾಯಿಲೆಗಳಾದ ಅರ್ಥರೈಟಿಸ್, "ಸ್ಪಾಂಡಿಲೇಟಸ್‌ಗಳನ್ನು ಗುಣಪಡಿಸುತ್ತದೆ. ಸಂಗೀತ ಕೇಂದ್ರ ನರಮಂಡಲದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ ಇದರಿಂದ ಸಂಗೀತ ಒಂದು ವಿಜ್ಞಾನವ್ಯೂ ಹೌದು ಎಂದು ಸ್ಪಷ್ಟವಾಗುತ್ತದೆ. ನೂರಕ್ಕೆ ತೊಂಭತ್ತರಷ್ಟು ಜನ ಸಂಗೀತದಿಂದ ಮಾನಸಿಕ ಶಾಂತಿಯನ್ನು ಹೊಂದಿದ್ದಾರೆ ಎಂದು ಪ್ರೋ. ಚಟರ್ಜಿಯವರು ಒಪ್ಪಿಕೊಂಡಿದ್ದಾರೆ.

ಅಷ್ಟೇ ಅಲ್ಲ, ಸಂಗೀತಗಾರ ಪ್ರತಿದಿನ ಏಕಚಿತ್ತದಿಂದ, ಏಳೆಂಟುತಾಸು ಅರ್ಧಪದ್ಮಾಸನ ಅಥವಾ ಪದ್ಮಾಸನದಲ್ಲಿ ಬೆನ್ನುಬಾಗಿಸದೇ ಸೀದಾ ಕುಳಿತು ಒಂದೇ ಶ್ವಾಸದಲ್ಲಿ ಐದಾರು ನಿಮಿಷದವರೆಗೆ ಸ್ವರಹಚ್ಚುವುದೆಂದರೆ ಯೋಗದಿಂದ ಸ್ವರ ಸಿದ್ಧಿಯಲ್ಲವೆ? ನೃತ್ಯವು ಸಂಪೂರ್ಣವಾಗಿ ಯೋಗಾಸನದ ಮೇಲೆ ಅವಲಂಬಿಸಿದೆ.

ಸಂಗೀತವು ಮನಸ್ಸಿಗೆ ಅಖಂಡ ಶಾಂತಿಯನ್ನು ಕೊಡುತ್ತದೆ. ಸಂಗೀತದಲ್ಲಿರುವ ಯೋಗ, ಆರೋಗ್ಯ ಭಾಗ್ಯ ನೀಡುತ್ತದೆ. ಇದರಿಂದ ಮನಷ್ಯ ಯಾವಾಗಲೂ ಚಟುವಟಿಕೆಯಿಂದ ಇರುತ್ತಾನೆ. ತಲೆನೋವು, ಬೆನ್ನುನೋವು, ಹೊಟ್ಟೆನೋವು, ಸೊಂಟನೋವು, ಕೈಕಾಲು ಹರಿಯುವುದು, ಆಲಸ್ಯ ಬರುವುದಿಲ್ಲ. ಸಂಗೀತದಿಂದ ಆಯುಷ್ಯ ಅಭಿವೃದ್ಧಿಯಾಗುತ್ತದೆ. ಸಂಗೀತದಲ್ಲಿರುವ ಇಂಥ ಅನೇಕ ಶ್ರೇಷ್ಠ ಗುಣಗಳನ್ನು ಕಂಡೇ ನನ್ನ ರೋಗವು ಸಂಗೀತದಿಂದ ಬೇಗ ಗುಣವಾದಷ್ಟು ಮತ್ತಾವ ಔಷಧದಿಂದಲೂ ಗುಣವಾಗಿಲ್ಲ ಎಂದು ರಾಷ್ಟ್ರಪಿತ ಮಹಾತ್ಮಾಗಾಂಧಿಜಿಯವರು ಹೇಳಿದ್ದಾರೆ.

ಮಧುರ ಸಂಗೀತ ಮನುಷ್ಯನನ್ನು ಸಭ್ಯ, ನಮ್ರ, ವಿನಯ ಹಾಗೂ ವಿವೇಕಿಯನ್ನಾಗಿ ಮಾರ್ಪಡಿಸುತ್ತದೆ. ಸಂಗೀತ ಮತ್ತು ವ್ಯಕ್ತಿತ್ವ ಒಂದಕ್ಕೊಂದು. ಪೂರಕ ಸಂಗೀತದಿಂದ ವ್ಯಕ್ತಿತ್ವ ನಿರ್ಮಾಣಗೊಳ್ಳುತ್ತದೆ ಕಪ್ಪು ಮತ್ತು ಕುರೂಪಗಳನ್ನು ಕೂಡ ಸಂಗೀತವು ಸುಂದರರನ್ನಾಗಿ ಮಾಡುತ್ತದೆ ದ್ವೇಷ, ಈರ್ಷೆ, ಆಡಂಬರ ಮುಂತಾದ ಅಮಾನವೀಯ ಭಾವನೆಗಳನ್ನು ದೂರೀಕರಿಸಿ, ಮನೆಮನೆಯಲ್ಲಿ ಸದ್ಭಾವ, ಭಕ್ತಿ, ಬಂಧುತ್ವ, ಪ್ರೇಮ ಗಂಗಾಲಹರಿಯನ್ನು ಪ್ರವಹಿಸುತ್ತದೆ. ಸಂಗೀತದ ಪ್ರಭಾವದಿಂದ ಜನರ ಜೀವನ ಮತ್ತು ಜನರ ಮನಸ್ಸು ಪರಿವರ್ತನೆಯಾಗುತ್ತದೆ.

ಸಂಗೀತವು ಎಲ್ಲ ಜಾತಿಯ ಜನರನ್ನು ಒಂದುಗೂಡಿಸುವ ಏಕ ಮಹಾಶಕ್ತಿ, ಸಂಗೀತಕ್ಕೆ ಜಾತಿ ಇಲ್ಲ. ಸಂಗೀತಕ್ಕೆ ಒಂದೇ ಭಾಷೆ ದೇವರನ್ನು ಒಲಿಸಿಕೊಳ್ಳಬೇಕಾದರೆ ಭಕ್ತಿ ಇರಬೇಕು ಇಲ್ಲವೇ ಸಂಗೀತ ಇರಬೇಕು. ಸಂಗೀತದ ಮುಖಾಂತರ ಸಾಕ್ಷಾತ್ಕಾರ ಮಾಡಿಕೊಂಡು ಈಶ್ವರ ಸಾಯುಜ್ಯವನ್ನು ಪಡೆಯಲು ಶ್ರೇಷ್ಠಮಾರ್ಗ, ಮೀರಾಬಾಯಿ, ಕನಕದಾಸ, ಸೂರದಾಸ, ಕಬೀರದಾಸ, ಸಂತತುಕಾರಾಮ, ತ್ಯಾಗರಾಜ, ಪುರಂದರದಾಸ, ಪಂಚಾಕ್ಷರ ಗವಾಯಿಗಳವರು ಮುಂತಾದವರು ಸಂಗೀತದ ಮುಖಾಂತರ ದೇವರ ದರ್ಶನ ಹಾಗೂ ಮೋಕ್ಷವನ್ನು ಪಡೆದುಕೊಂಡಿದ್ದಾರೆ ಅಂತೆಯೇ ಭಾರತೀಯರು ಸಂಗೀತ ಮಾರ್ಗವನ್ನು ಸ್ವೀಕರಿಸಿ, ಕೀರ್ತನೆ, ಭಜನೆ ಮುಂತಾದವುಗಳಿಂದ ಬ್ರಹ್ಮಾನಂದವನ್ನು ಪಡೆಯುತ್ತಾರೆ. ಇದನ್ನು ಅರಿತೇ ಪಾಶ್ಚಾತ್ಯರು ಭಾರತೀಯ ಸಂಗೀತದತ್ತ ಚಲಿಸಿದ್ದಾರೆ.

ಇವುಗಳನ್ನು ಗಮನಿಸಿದರೆ, ಸಂಗೀತಗಾರರಲ್ಲಿ ಸಂಗೀತ ಸಾಹಿತ್ಯ, ಗಣಿತ ಹಾಗೂ ವೈಜ್ಞಾನಿಕ ದೃಷ್ಟಿ ಇದೆ ಎಂಬುದು ಸಂಗೀತ ಇತಿಹಾಸ ಸಾರಿ ಹೇಳುತ್ತದೆ. ಸಂಗೀತವು ಮಾನವಕುಲಕ್ಕೆ ವರದಾನವಾಗಿದೆ ಹೀಗೆ ಸಂಗೀತದ ಕಾರ್ಯಗಳನ್ನು ಜೀವನದ ಪ್ರತಿಯೊಂದು ಹೆಜ್ಜೆಹೆಜ್ಜೆಗೂ ಕಾಣಬಹುದು.

ಸಂಗೀತ ಸಂಸ್ಕಾರದಿಂದ ವ್ಯಷ್ಟಿ, ಸಮಷ್ಠಿ, ರಾಷ್ಟ್ರ ಮತ್ತು ವಿಶ್ವಶಾಂತಿ, ಸಮೃದ್ಧಿ ಸಂಯಮ, ಸಹೋದರತ್ವ, ವಿಶ್ವಬಂಧುತ್ವ ಸ್ಥಾಪನೆಯಾಗುವುದರಲ್ಲಿಯೇ ಸಂಶಯವೇ ಇಲ್ಲ ಇದೇ ಎಲ್ಲವೂ ಸಂಗೀತದಿಂದಾಗುವ ಪ್ರಯೋಜನಗಳು.

***

# ಅಧ್ಯಾಯ–11

## ಸಂಗೀತ ವಾದ್ಯಗಳ ಸಾಮಾನ್ಯ ವರ್ಗೀಕರಣ

"ಗೀತಂ ಚತುರ್ವಿಧಾತ್ ವಾದ್ಯಾತ್ ಜಾಯತೇ ಚೋಪರಜ್ಯತೇ।
ತತ್ತತಂ, ಸುಷಿರಂ ಚ ಅವನದ್ಧಂ ಘನಮಿತಿಸ್ಮೃತಂ॥"

ಪ್ರಾಚೀನ ಸಂಗೀತ ವಿದ್ವಾಂಸರುಗಳು ಭಾರತೀಯ ಸಂಗೀತ ವಾದ್ಯಗಳನ್ನು ಸಾಮಾನ್ಯವಾಗಿ 4 ಪ್ರಕಾರಗಳಲ್ಲಿ ವಿಂಗಡಿಸಿದ್ದಾರೆ. ತತ, ಸುಷಿರ, ಅವನದ್ದ ಮತ್ತು ಘನ ಇವೇ ಆ 4 ವಾದ್ಯ ಪ್ರಕಾರಗಳಾಗಿವೆ.

**1.ತತ ವಾದ್ಯ ಪ್ರಕಾರ:** ತಂತಿ ವಾದ್ಯಗಳು ತತ ವಾದ್ಯ ಪ್ರಕಾರದಲ್ಲಿ ಬರುತ್ತವೆ. ಇವುಗಳಲ್ಲಿ 2 ಪ್ರಕಾರಗಳು. ಕೆಲವು ವಾದ್ಯಗಳಿಗೆ ತಂತಿಗಳನ್ನು ಬಿಗಿದು ನಾದೋತ್ಪತ್ತಿ ಆಗುವಂತೆ ನಿರ್ಮಿಸಿರುತ್ತಾರೆ. ಅಂತಹ ವಾದ್ಯಗಳ ತಂತಿಗಳನ್ನು ಬೆರಳುಗಳಿಂದ ಮೀಟಿ ನುಡಿಸಲಾಗುತ್ತದೆ. ಇವು ತತವಾದ್ಯಗಳು. ತಂಬೂರಾ, ಸಿತಾರ್, ಸರೋದ್, ಬೀನ್, ಇವು ತತವಾದ್ಯ ಪ್ರಕಾರಗಳಲ್ಲಿ ಬರುತ್ತವೆ. ಇನ್ನೂ ಕೆಲವು ವಾದ್ಯಗಳನ್ನು ವಿಶೇಷ ಸಾಧನಗಳಾದ ಗಜ ಅಥವಾ ಕಮಾನಿನಿಂದ ತಂತಿಗಳನ್ನು ತೀಡಿ ನುಡಿಸಲಾಗುತ್ತದೆ. ಇವುಗಳಿಗೆ ವಿತತ ವಾದ್ಯಗಳೆನ್ನುವರು. ದಿಲ್‌ರುಬಾ, ಸಾರಂಗಿ, ವಾಯೋಲಿನ್ ಇನ್ನೂ ಮುಂತಾದ ವಾದ್ಯಗಳು ವಿತತವಾದ್ಯ ಪ್ರಕಾರದಲ್ಲಿ ಸೇರ್ಪಡೆಗೊಳ್ಳುತ್ತವೆ.

**2. ಸುಷಿರ ವಾದ್ಯ ಪ್ರಕಾರ:** ಗಾಳಿಯ ಒತ್ತಡದಿಂದ ಅಥವಾ ಗಾಳಿಯನ್ನು ಊದಿ ಬಾರಿಸುವಂತಹ ವಾದ್ಯಗಳೆಲ್ಲವೂ ಸುಷಿರ ವಾದ್ಯ ಪ್ರಕಾರದಲ್ಲಿ ಸಮಾವೇಶಗೊಳ್ಳುತ್ತವೆ. ಕೆಲವು ವಾದ್ಯಗಳನ್ನು ಬಾಯಿಂದ ಊದಿ ಸ್ವರವನ್ನು ಹೊರಡಿಸಲಾಗುತ್ತದೆ. ಹಾಗೆಯೇ ಗಾಳಿಯ ಒತ್ತಡವನ್ನು ಹಾಕಿಯೂ ಕೆಲವಾದ್ಯಗಳನ್ನು ನುಡಿಸಲಾಗುತ್ತದೆ. ಅಂತಹ ವಾದ್ಯಗಳೆಲ್ಲವನ್ನೂ ಸುಷಿರವಾದ್ಯ ಪ್ರಕಾರಗಳಲ್ಲಿ ಸಮಾವೇಶಗೊಳಿಸಲಾಗಿದೆ. ಕೊಳಲು, ಶಂಖ, ಶಹನಾಯಿ, ಪುಂಗಿ, ಹಾರ್ಮೋನಿಯಂ ಮುಂತಾದ ವಾದ್ಯಗಳು ಸುಷಿರ ವಾದ್ಯಗಳಾಗಿವೆ.

**3. ಅವನದ್ಧ ವಾದ್ಯ ಪ್ರಕಾರ:** ಚರ್ಮಾಚ್ಛಾದಿತ ವಾದ್ಯಗಳೆಲ್ಲವೂ ಅವನದ್ಧ ವಾದ್ಯ ಪ್ರಕಾರದಲ್ಲಿ ಬರುತ್ತವೆ. ಈ ಪ್ರಕಾರದ ವಾದ್ಯಗಳಲ್ಲಿ, ಪೊಳ್ಳಾದ ಲೊಹದ ಇಲ್ಲವೇ ಕಟ್ಟಿಗೆಯ ತುಂಡಿನ ಬಾಯಿಗೆ ಚರ್ಮದ ಹೊದಿಕೆಯನ್ನು ಮಾಡಿ ಭದ್ರವಾಗಿ ಬಿಗಿದು ಕೈಗಳಿಂದ ಅಥವಾ ಕೋಲುಗಳಿಂದ ನುಡಿಸಲಾಗುತ್ತದೆ. ಢಮರು, ಮೃದಂಗ, ತಬಲಾ, ನಗಾರಿ, ಡೊಳ್ಳು, ಪಖಾವಜ್ ಇತ್ಯಾದಿಗಳು ಅವನದ್ಧ ವಾದ್ಯ ಪ್ರಕಾರದವುಗಳಾಗಿವೆ.

**4. ಘನವಾದ್ಯ ಪ್ರಕಾರ:**ಧಾತು ನಿರ್ಮಿತ ವಾದ್ಯಗಳು ಘನವಾದ್ಯ ಪ್ರಕಾರದಲ್ಲಿ ಬರುತ್ತವೆ. ಮಣ್ಣು, ಕಂಚು, ತಾಮ್ರ ಇತ್ಯಾದಿ ಧಾತುಗಳಿಂದ ನಿರ್ಮಿಸಿದ ವಾದ್ಯಗಳನ್ನು ಆಘಾತದಿಂದ ನುಡಿಸಲಾಗುತ್ತದೆ. ಅವೆಲ್ಲವುಗಳು ಘನವಾದ್ಯ ಪ್ರಕಾರದಲ್ಲಿ ಸೇರುತ್ತವೆ. ಝಾಂಜ, ಘಟಂ, ಘಂಟೆ, ಜಾಗಂಟೆ ಇತ್ಯಾದಿಗಳು ಘನ ವಾದ್ಯ ಪ್ರಕಾರಕ್ಕೆ ಉದಾಹರಣೆಗಳಾಗಿವೆ.

**ತಂಬೂರಿ(ತಾನ್‌ಪುರಾ)**

ತ ಂಬೂರಿಯು ಅತ್ಯಂತ ಪುರಾತನವಾದ ಭಾರತೀಯ ಶೃತಿ ವಾದ್ಯವಾಗಿದೆ ಸಂಗೀತಗಾರರಿಗೆ ಹಿನ್ನೆಲೆಯಾಗಿ ಅಖಂಡವಾದ ಶೃತಿಯನ್ನೊದಗಿಸುವ ಈ ವಾದ್ಯದಿಂದ ಹೊರಹೊಮ್ಮುವ ನಾದವು ಗಾಯಕರ ಕಂಠಕ್ಕೆ ಆಧಾರವಾದುದಾಗಿದೆ. ಹೀಗಾಗಿ ಸಂಗೀತ ಕ್ಷೇತ್ರದಲ್ಲಿ ತಂಬೂರಿಯು ಅತಿ ಮುಖ್ಯವಾದ ವಾದ್ಯವಾಗಿದೆ.

ಚೆನ್ನಾಗಿ ಬಲಿತ ಕುಂಬಳಕಾಯಿಯ ಮೇಲ್ಭಾಗವನ್ನು ಕೊರೆದು ಅದಕ್ಕೆ ತೆಳುವಾದ ಕಟ್ಟಿಗೆ ಹಲಗೆ ತಬಲಿಯಿಂದ ಮುಚ್ಚಲಾಗುತ್ತದೆ. ಈ ಕುಂಬಳಕಾಯಿ(ತುಂಬಿ)ಗೆ ಕಟ್ಟಿಗೆಯ ಪೊಳ್ಳಾದ ದಂಡಿಗೆಯನ್ನು ಹೊಂದಿಸುತ್ತಾರೆ. ದಂಡಿಗೆಯ ಮೇಲ್ತುದಿಗೆ ನಾಲ್ಕು ಕುಂಟಿಗಳನ್ನು ಕೂರಿಸಿದ್ದು,ತಂಬೂರಿಯ ನಾಲ್ಕು ತಂತಿಗಳನ್ನು ಈ ಕುಂಟಿಗಳಿಗೆ ಸುತ್ತಿರುತ್ತಾರೆ. ತಬಲಿಯ ಮಧ್ಯಭಾಗದಲ್ಲಿ ಕೂಡ್ರಿಸಿಟ್ಟ ಘೋಡಿ ಯ ಮೇಲೆ ಈ ನಾಲ್ಕು ತಂತಿಗಳು ಹಾದು ಹೋಗಿ ಕೆಳಭಾಗದಲ್ಲಿರುವ ' ಲಂಗೋಟ'ದಲ್ಲಿ ಪೋಣಿಸಲ್ಪಟ್ಟಿರುತ್ತದೆ. ಲಂಗೋಟ ಮತ್ತು ಘೋಡಾದ ನಡುವಿನ ಅಂತರದಲ್ಲಿ 'ದ' ಆಕಾರದ ಮಣಿಗಳನ್ನು ಪ್ರತಿಯೊಂದು ತಂತಿಯಲ್ಲಿಯೂ ಪೋಣಿಸಿದ್ದು, ಸೂಕ್ಷ್ಮ ಸ್ವರವನ್ನು ಹೊಂದಿಸಲು ಬಳಸಲಾಗುತ್ತದೆ. ಕುಂಟಿ ಅಥವಾ ಕಿವಿಯನ್ನು ತಿರುಗಿಸುವ ಮೂಲಕ ತಂಬೂರಿಯನ್ನು ಶೃತಿಗೊಳಿಸಲಾಗುತ್ತದೆ.

ಮೊದಲನೆಯ ತಂತಿಯನ್ನು ಮಂದ್ರಸಪ್ತಕದ ಪಂಚಮ ಸ್ವರಕ್ಕೂ, ಎರಡು ಹಾಗೂ ಮೂರನೆಯದನ್ನು ಮಧ್ಯಸಪ್ತಕದ ಷಡ್ಜಕ್ಕೂ, ನಾಲ್ಕನೆಯದನ್ನು ಮಂದ್ರಸಪ್ತಕದ ಷಡ್ಜಕ್ಕೂ ಹೊಂದಿಸಲಾಗಿರುತ್ತದೆ. ಶೃತಿಗೊಳಿಸಿದ ಈ ತಂತಿಗಳನ್ನು ಕ್ರಮವಾಗಿ ಮೀಟಿದಾಗ 'ಪ ಸಾ ಸಾ ಸಾ' ಎಂದು ನುಡಿಯಲ್ಪಡುತ್ತದೆ.